## ದಿನಾಂಕ: 18.09.2021 ರಂದು ವಾರ್ಡ್ ಸಂಖ್ಯೆ 184 ಉತ್ತರಹಳ್ಳಿ ವಾರ್ಡ್ ಕಛೇರಿಯಲ್ಲಿ ನಡೆದ ವಾರ್ಡ್ ಸಮಿತಿ ಸಭೆಯ ನಡಾವಳಿಗಳು.

**ಹಾಜರಿದ್ದ ಅಧಿಕಾರಿಗಳು:-**

1. ಶ್ರೀ ಡಿ.ಸುಂದರಯ್ಯ– ವಾರ್ಡ್ ಸಮಿತಿ ನೋಡಲ್ ಅಧಿಕಾರಿ
2. ಶ್ರೀ ವೆಂಕಟರಮಣ.ಕೆ.ವಿ – ಸಹಾಯಕ ಅಭಿಯಂತರರು ಮತ್ತು ಸಂಚಾಲಕರು (ವಾರ್ಡ್ 184ಉತ್ತರಹಳ್ಳಿ)
3. ಶ್ರೀಮತಿ ರೇಷ್ಮಾ – ಸಹಾಯಕ ಅಭಿಯಂತರರು, ಬೃಹತ್ ಮಳೆ ನೀರು ಗಾಲುವೆ, ಬೊಮ್ಮನಹಳ್ಳಿ
4. ಶ್ರೀ ಶಶಿಕುಮಾರ್ – ಹಿರಿಯ ಆರೋಗ್ಯ ಪರಿವೀಕ್ಷಕರು, ವಾರ್ಡ್ ಸಂಖ್ಯೆ 184
5. ಶ್ರೀ ಅನಿಲ್ ಕುಮಾರ್.ಎಸ್ – ಸಹಾಯಕ ಅಭಿಯಂತರರು, ಎಸ್–18 ಉಪವಿಭಾಗ, ಬೆಸ್ಕಾಂ
6. ಶ್ರೀ ನರಸಪ್ಪ.ಹೆಚ್ – ತೋಟಗಾರಿಕೆ ಸಹಾಯಕರು, ಬೊಮ್ಮನಹಳ್ಳಿ,
7. ಶ್ರೀ ರಮೇಶ್.ಡಿ – ಸಹಾಯಕ ಅಭಿಯಂತರರು, ವಿದ್ಯುತ್ ವಿಭಾಗ ಬೊಮ್ಮನಹಳ್ಳಿ
8. ಶ್ರೀ ನಿರ್ಮಲಾ.ವೈ.ಎನ್ – ಸಹಾಯಕ ಅಭಿಯಂತರರು, ಬಿ.ಡಬ್ಲ್ಯೂ.ಎಸ್.ಎಸ್.ಬಿ ಇಲಾಖೆ
9. ಶ್ರೀ ಶಿವರಾಜು – ಮೇಲ್ವಿಚಾರಕರು, ಘನತ್ಯಾಜ್ಯ ನಿರ್ವಹಣೆ
10. ಶ್ರೀ ಸಿದ್ದರಾಜು – ಮೇಲ್ವಿಚಾರಕರು, ಬೀದಿ ದೀಪಗಳು, ಬಿ.ಬಿ.ಎಂ.ಪಿ
11. ಶ್ರೀ ಬಾಬು – ಮೇಲ್ವಿಚಾರಕರು, ಘನತ್ಯಾಜ್ಯ ನಿರ್ವಹಣೆ
12. ಡಾ// ದೀಕ್ಷಿತ – ಕೋವಿಡ್–19 ಆರೋಗ್ಯ ವೈದ್ಯಾಧಿಕಾರಿಗಳು, ಬೆಂಗಳೂರು ದಕ್ಷಿಣ ವಿಭಾಗ

**ಹಾಜರಿದ್ದ ಸಮಿತಿ ಸದಸ್ಯರು:-**

1. ಶ್ರೀ ಮೃತ್ಯುಂಜಯ.ಎಂ.ಎಸ್ –ಹನುಮಹಿಲ್ಸ್ ಬಡಾವಣೆRWA
2. ಶ್ರೀ ಅರುಣ್ – ಎ.ಜಿ.ಎಸ್ ಬಡಾವಣೆ RWA
3. ಶ್ರೀ ಅಮರ್.ಎಂ.ಆರ್ – ಎ.ಜಿ.ಎಸ್ ಬಡಾವಣೆ RWA
4. ಶ್ರೀ ಎಸ್.ಕೆ.ಸುದೀಂದ್ರ – ಪೂರ್ಣಪ್ರಜ್ಞಾಲೇಔಟ್ ಬಡಾವಣೆ RWA
5. ಶ್ರೀ ಶ್ರೀನಾಥ್ – ಜಯನಗರ ಹೌಸಿಂಗ್ ಬಡಾವಣೆ RWA
6. ಶ್ರೀ ಪಿಯೂಷ್ – ಹ್ಯಾಪಿ ವ್ಯಾಲಿ ಬಡಾವಣೆ RWA
7. ಶ್ರೀ ಕಾಮತ್ – ಲಿಬರ್ಟಿ ಸ್ಕ್ವಾರ್ ಅಪಾರ್ಟ್‌ಮೆಂಟ್ RWA

ಮೇಲೆ ಹಾಜರಿದ್ದ ಸಮಿತಿ ಸದಸ್ಯರ ಹಾಗೂ ಅಧಿಕಾರಿಗಳ ಸಮ್ಮುಖದಲ್ಲಿ ವಾರ್ಡ್ ಸಮಿತಿ ನೋಡಲ್ ಅಧಿಕಾರಿಯಾದ ಶ್ರೀ ಡಿ.ಸುಂದರಯ್ಯ ರವರು ಸಭೆಯನ್ನುದ್ದೇಶಿಸಿ ಮಾತನಾಡುತ್ತಾ, ಸಭೆ ಸೇರಿರುವ ಉದ್ದೇಶ ಮತ್ತು ಸಭೆಯ ಮಹತ್ವವನ್ನು, ಸದಸ್ಯರ ಮುಖ ಪರಿಚಯದೊಂದಿಗೆ ವಿವರಿಸುತ್ತಾ, ಹಾಜರಿದ್ದ ಸದಸ್ಯರಿಗೆ ಹಾಗೂ ಅಧಿಕಾರಿಗಳಿಗೆ ಸ್ವಾಗತ ಕೋರಿದರು.

ಸದರಿ ಸಭೆಯಲ್ಲಿ ಈ ಕೆಳಕಂಡಂತೆ ವಿವಿಧ ವಿಷಯಗಳ ಬಗ್ಗೆ ವಾರ್ಡ್ ಸಮಿತಿಯು ವಿವರವಾಗಿ ಚರ್ಚಿಸಿದಂತೆ ಮುಂದಿನ ಕ್ರಮ ಕೈಗೊಳ್ಳಲು ಸಂಬಂಧಪಟ್ಟ ಅಧಿಕಾರಿ / ಇಲಾಖೆಗಳಿಗೆ ಸೂಚಿಸಲಾಗಿರುತ್ತದೆ.

1. **ಬೆಂಗಳೂರು ನೀರು ಮತ್ತು ಒಳಚರಂಡಿ ಇಲಾಖೆಗೆ ಸಂಬಂಧಪಟ್ಟಂತೆ**
   - ಹೆಚ್.ಎಂ.ಎಸ್ ಬಡಾವಣೆಯಲ್ಲಿ ಬಿ.ಡಬ್ಲ್ಯೂ.ಎಸ್.ಎಸ್.ಬಿ ಇಲಾಖೆ ವತಿಯಿಂದ ಹೊಸದಾಗಿ ನೀರಿನ ಸಂಪರ್ಕದ ಪೈಪುಗಳನ್ನು ಅಳವಡಿಸಿ ಮೀಟರ್ ಅಳವಡಿಸಿದ್ದು, ಇದುವರೆಗೂ ಕಾವೇರಿ ನೀರು ಬಿಟ್ಟಿರುವುದಿಲ್ಲ. ಆದುದರಿಂದ ಅತೀ ತುರ್ತಾಗಿ ಕಾವೇರಿ ಕುಡಿಯುವ ನೀರನ್ನು ಕಲ್ಪಿಸಿಕೊಡಬೇಕೆಂದು ಕೋರಿರುತ್ತಾರೆ.
   - ಹ್ಯಾಪಿ ವ್ಯಾಲಿ ಬಡಾವಣೆಯಲ್ಲಿ ಹಾಳಾಗಿರುವ ಒಳಚರಂಡಿ ಸಂಪರ್ಕವನ್ನು ತೆರವುಗೊಳಿಸಿ ಹೊಸದಾಗಿ ಒಳಚರಂಡಿ ಪೈಪುಗಳನ್ನು ಅಳವಡಿಸಿಕೊಡಲು ಕೋರಿರುತ್ತಾರೆ.
   - 80 ಅಡಿ ಗುಬ್ಬಲಾಳ ಮುಖ್ಯರಸ್ತೆಯಲ್ಲಿ ಒಳಚರಂಡಿ ಪೈಪು ಹೊಡೆದು ಸ್ಯಾನಿಟರಿ ನೀರು ರಸ್ತೆಯ ಮಾರ್ಗದಲ್ಲಿ ಹರಿದಾಡುತ್ತಿರುತ್ತದೆ. ಅದನ್ನು ಪುನರ್ ನಿರ್ಮಿಸಲು ಕೋರಿರುತ್ತಾರೆ.

... /ಕಿರಿಯ ಅಭಿ...
...ನ ಹಿರಿಯ/ಕಿರಿ...
10. ಸಹಾ...

ಈ ಬಗ್ಗೆ ಮೇಲಿನ ಎಲ್ಲಾ ಅಂಶಗಳಿಗೆ ಕ್ರಮ ಕೈಗೊಳ್ಳಲು ಮಾನ್ಯ ನೋಡಲ್ ಅಧಿಕಾರಿ ರವರು ಸಂಬಂಧಪಟ್ಟ ಸಹಾಯಕ ಕಾರ್ಯಪಾಲಕ ಅಭಿಯಂತರರು ಬೆಂಗಳೂರು ಕುಡಿಯುವ ನೀರು ಮ... ಒಳಚರಂಡಿ ಮಂಡಳಿ ರವರಿಗೆ ಸೂಚಿಸಿರುತ್ತಾರೆ.

2. **ಬೆಸ್ಕಾಂ ಇಲಾಖೆಗೆ ಸಂಬಂಧಪಟ್ಟಂತೆ.**

- ವಾರ್ಡ್ ವ್ಯಾಪ್ತಿಯಲ್ಲಿ ದುರಸ್ಥಿಗೊಂಡಿರುವ ವಿದ್ಯುತ್ ಕಂಬಗಳನ್ನು ತೆರವುಗೊಳಿಸಿ ಹೊಸದಾಗಿ ವಿದ್ಯುತ್ ಕಂಬಗಳನ್ನು ಅಳವಡಿಸಲು ಕೋರಿರುತ್ತಾರೆ.
- ವಾರ್ಡ್ ವ್ಯಾಪ್ತಿಯಲ್ಲಿ ಹೊಸದಾಗಿ ಅಂತರ್ಗತ ವಿದ್ಯುತ್ ಕೇಬಲ್ ಅಳವಡಿಸಲು ಅಲ್ಲಲ್ಲಿ ಛೇಂಬರ್‌ಗಳನ್ನು ನಿರ್ಮಿಸಿದ್ದು, ಸದರಿ ಛೇಂಬರ್‌ಗಳು ರಸ್ತೆಯ ಮಟ್ಟಕ್ಕಿಂತ ಎತ್ತರವಾಗಿದ್ದು, ಸದರಿ ಛೇಂಬರ್‌ಗಳನ್ನು ರಸ್ತೆ ಮಟ್ಟಕ್ಕೆ ತರಲು ಕೋರಿರುತ್ತಾರೆ.
- ವಾರ್ಡ್ ವ್ಯಾಪ್ತಿಯಲ್ಲಿ ಹೊಸದಾಗಿ ಅಳವಡಿಸಿರುವ ವಿದ್ಯುತ್ ಕೇಬಲ್‌ಗಳು ಅಲ್ಲಲ್ಲಿಯೇ ರಸ್ತೆಯಲ್ಲಿದ್ದು, ಅದನ್ನು ತೆರವುಗೊಳಿಸಲು ಸಾರ್ವಜನಿಕರು ಕೋರಿರುತ್ತಾರೆ.

ಈ ಮೇಲಿನ ಎಲ್ಲಾ ಅಂಶಗಳಿಗೆ ಕ್ರಮ ಕೈಗೊಳ್ಳಲು ಮಾನ್ಯ ನೋಡಲ್ ಅಧಿಕಾರಿ ರವರು ಸಂಬಂಧಪಟ್ಟ ಸಹಾಯಕ ಕಾರ್ಯಪಾಲಕ ಅಭಿಯಂತರರು ಬೆಸ್ಕಾಂ ಇಲಾಖೆ ರವರಿಗೆ ಸೂಚಿಸಿರುತ್ತಾರೆ.

3. **ಬೀದಿ ದೀಪಗಳಿಗೆ ಸಂಬಂಧಪಟ್ಟಂತೆ**

- ಪೂರ್ಣಪ್ರಜ್ಞಾ ಬಡಾವಣೆಯಲ್ಲಿ ರಸ್ತೆ ಬದಿಯ ಬೀದಿ ದೀಪವು ದುರಸ್ಥಿಗೊಂಡಿದ್ದು, ಸದರಿ ಹಾಳಾಗಿರುವ ಬೀದಿ ದೀಪದ ಲೈಟ್‌ಗಳನ್ನು ಹೊಸದಾಗಿ ಅಳವಡಿಸಲು ಕೋರಿರುತ್ತಾರೆ.
- ಹ್ಯಾಪಿ ವ್ಯಾಲಿ ಬಡಾವಣೆಯಲ್ಲಿ ಮತ್ತು ಪೂರ್ಣಪ್ರಜ್ಞಾ ಬಡಾವಣೆ ಪಾರ್ಕ್-7 ರಲ್ಲಿ ಬೀದಿ ದೀಪಗಳನ್ನು ಎಲ್.ಇ.ಡಿ ಲೈಟ್ ಬದಲಾಯಿಸಲು ಕೋರಿರುತ್ತಾರೆ.

ಈ ಮೇಲಿನ ಎಲ್ಲಾ ಅಂಶಗಳಿಗೆ ಕ್ರಮ ಕೈಗೊಳ್ಳಲು ಮಾನ್ಯ ನೋಡಲ್ ಅಧಿಕಾರಿ ರವರು ಸಂಬಂಧಪಟ್ಟ ಸಹಾಯಕ ಕಾರ್ಯಪಾಲಕ ಅಭಿಯಂತರರು ಬೆಸ್ಕಾಂ ಇಲಾಖೆ ರವರಿಗೆ ಸೂಚಿಸಿರುತ್ತಾರೆ.

4. **ಉತ್ತರಹಳ್ಳಿ ಉಪವಿಭಾಗಕ್ಕೆ ಸಂಬಂಧಪಟ್ಟಂತೆ**

- ನಂದಕುಮಾರ್ ಬಡಾವಣೆಯ 7ನೇ ಮತ್ತು 8ನೇ ಅಡ್ಡರಸ್ತೆಯಲ್ಲಿ ರಸ್ತೆ ಬದಿಯ ಚರಂಡಿಗಳಿಗೆ ಕವರಿಂಗ್ ಸ್ಲ್ಯಾಬ್ ಅಳವಡಿಸಲು ಕೋರಿರುತ್ತಾರೆ.
- ಪೂರ್ಣ ಪ್ರಜ್ಞಾ ಬಡಾವಣೆಯ ಅಡ್ಡರಸ್ತೆ ಮತ್ತು ಮುಖ್ಯರಸ್ತೆಗಳಿಗೆ ನಾಮಫಲಕಗಳನ್ನು ಅಳವಡಿಸಲು ಕೋರಿರುತ್ತಾರೆ.
- ಹ್ಯಾಪಿ ವ್ಯಾಲಿ ಬಡಾವಣೆಯಲ್ಲಿ ರಸ್ತೆ ಬದಿಯ ಚರಂಡಿಗಳಲ್ಲಿ ತುಂಬಿಕೊಂಡಿರುವ ಹೂಳನ್ನು ತೆರವುಗೊಳಿಸಲು ಕೋರಿರುತ್ತಾರೆ.

ಈ ಮೇಲಿನ ಎಲ್ಲಾ ಅಂಶಗಳಿಗೆ ಕ್ರಮ ಕೈಗೊಳ್ಳಲು ಮಾನ್ಯ ನೋಡಲ್ ಅಧಿಕಾರಿ ರವರು ಸಹಾಯಕ ಕಾರ್ಯಪಾಲಕ ಅಭಿಯಂತರರು ಉತ್ತರಹಳ್ಳಿ ಉಪವಿಭಾಗ ರವರಿಗೆ ಸೂಚಿಸಿರುತ್ತಾರೆ

ಈ ಎಲ್ಲಾ ವಿಷಯದ ಬಗ್ಗೆ ಚರ್ಚಿಸಲಾಗಿ ಸೂಕ್ತ ಕ್ರಮ ಕೈಗೊಳ್ಳುವ ನಿರೀಕ್ಷಣೆಯೊಂದಿಗೆ ಸಮಿತಿಯ ಅಧ್ಯಕ್ಷರಾದ ಶ್ರೀ ಡಿ.ಸುಂದರಯ್ಯ ರವರು ಎಲ್ಲರಿಗೂ ವಂದನೆಗಳನ್ನು ಕೋರುತ್ತಾ ಸಭೆಯನ್ನು ಮುಕ್ತಾಯಗೊಳಿಸಲಾಯಿತು.

| | |
|---|---|
| ಶ್ರೀ ಡಿ.ಸುಂದರಯ್ಯ | ಶ್ರೀ ವೆಂಕಟರಮಣ.ಕೆ.ವಿ |
| ನೋಡಲ್ ಅಧಿಕಾರಿ ಹಾಗೂ ಸ.ಕಾ.ನಿ.ಅ | ಸಂಚಾಲಕರು ಹಾಗೂ ಸ.ಅ-184 |
| ಅಂಜನಾಪುರ ಉಪವಿಭಾಗ | |